# ಸಂಪಾದಕೀಯ

## ಕಾರ್ಯನೀತಿ

### ಮೂರು ದೃಷ್ಟಿಕೋನಗಳು

**ನಾವು** ಮಾಡುವ ಕೆಲಸವನ್ನು ಮೂರುರೀತಿಯಲ್ಲಿ ಮಾಡ ಬಹುದು : ಕೇವಲ ಉದ್ಯೋಗದ ದೃಷ್ಟಿಯಿಂದ (as a profession), ಕರ್ತವ್ಯದ ದೃಷ್ಟಿಯಿಂದ ಮತ್ತು ಸೇವಾ ದೃಷ್ಟಿಯಿಂದ. ಉದ್ಯೋಗದ ದೃಷ್ಟಿಯಿಂದ ಕೆಲಸವನ್ನು ಮಾಡುವುದು ಕೆಲಸ ಮಾಡದೆ ಇರುವುದಕ್ಕಿಂತ ಒಳ್ಳೆಯದು. ನಾನು ಸಂಬಳಕ್ಕಾಗಿ ಕೆಲಸ ಮಾಡುತ್ತೇನೆ, ಇದು ಅನಿವಾರ್ಯ ಎಂಬ ಮನೋಭಾವದಿಂದ ಪಾಲಿಗೆ ಬಂದ ಕೆಲಸವನ್ನು ಮಾಡುವುದು. ಸಂಬಳ ಅಥವಾ ಏನೂ ಪ್ರತಿಫಲ ಇಲ್ಲದಿದ್ದರೆ ಆ ವ್ಯಕ್ತಿ ಏನೂ ಮಾಡುವುದೇ ಇಲ್ಲ, ಅಥವಾ ಅಸಡ್ಡೆಯಿಂದ ಮಾಡಬಹುದು. ಇಲ್ಲಿ ಸಂಬಳ ಮುಖ್ಯ, ಕೆಲಸ ಗೌಣ. ಆದ್ದರಿಂದ ಕೆಲಸ ಮಾಡದೆಯೇ ಅಥವಾ ಕಡಮೆ ಮಾಡಿ ಸಂಬಳ ಹೆಚ್ಚು ಪಡೆಯುವ ಪ್ರವೃತ್ತಿ ಅಧಿಕವಾಗುತ್ತ ಹೋಗುತ್ತದೆ. ಇಂದಿನ ಎಷ್ಟೋ ಮುಷ್ಕರಗಳ ಒಟ್ಟು ಸಾರಾಂಶ ಇಷ್ಟು: "ನನಗೆ ಸಂಬಳ ಹೆಚ್ಚಾಗಲಿ ಮತ್ತು ಕೆಲಸ ಕಡಮೆಯಾಗಲಿ." ಎರಡನೆಯದು ಕರ್ತವ್ಯದ ದೃಷ್ಟಿಯಿಂದ ಮಾಡುವುದು. ಇದು ಮೊದಲಿನದಕ್ಕಿಂತಲೂ ಉನ್ನತ ದೃಷ್ಟಿ. ಇಲ್ಲಿ ಸಂಬಳ ಗೌಣ, ಕರ್ತವ್ಯ ಮುಖ್ಯ. ಇಲ್ಲಿ ವ್ಯಕ್ತಿಯು ಕರ್ತವ್ಯನಿಷ್ಠೆಯಿಂದ ತನ್ನ ಪಾಲಿಗೆ ಬಂದ ಕೆಲಸವನ್ನು ದಕ್ಷತೆಯಿಂದ ನಿರ್ದೋಷವಾಗಿ ಮಾಡಲು ಪ್ರಯತ್ನಿಸುತ್ತಾನೆ. "ನಾನು ಸಂಬಳ ಪಡೆಯುತ್ತೇನೆ, ಅದಕ್ಕನುಗುಣವಾಗಿ ನಾನು ಕೆಲಸ ಮಾಡಲೇಬೇಕು," ಅಥವಾ "ನಾನು ಈ ಸ್ಥಾನದಲ್ಲಿರುವುದರಿಂದ ಇದು ನನ್ನ ಕರ್ತವ್ಯ" ಎಂದು ಆತ ಭಾವಿಸುತ್ತಾನೆ. ಇಲ್ಲಿ ಒತ್ತಾಯವಿದೆ, ಆತನಿಗೆ ಕೆಲಸ ಇನ್ನೂ ಸ್ವಾಭಾವಿಕವಾಗಿಲ್ಲ.

**ಎಲ್ಲರೂ ನಮ್ಮ ಪಾಲಿಗೆ ನಿಕಟವರ್ತಿಗಳಾದಾಗ ನಮ್ಮ ಕೆಲಸಗಳು ಕೇವಲ ಕರ್ತವ್ಯಗಳಾಗಿ ಉಳಿಯದೆ ಅವು ದಯಾಪೂರ್ಣವೂ ಪ್ರೀತಿಪೂರ್ಣವೂ ಆಗುತ್ತವೆ.**

ಈ ಕರ್ತವ್ಯದೃಷ್ಟಿ ಮನಸ್ಸಿಗೆ ನೆಮ್ಮದಿಯನ್ನು ನೀಡುವುದಿಲ್ಲ. ಕರ್ತವ್ಯ ಒಂದು ಹೊರೆಯಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಕರ್ತವ್ಯವು ನಡುಬೇಸಿಗೆಯ ಉರಿ ಬಿಸಿಲಿನಂತೆ, ವ್ಯಕ್ತಿಯ ಅಂತರಂಗವನ್ನು ದಹಿಸುತ್ತದೆ. ಇಲ್ಲಿ ವ್ಯಕ್ತಿಯ ಗಮನವೆಲ್ಲ ಕೆಲಸದ ಯಾಂತ್ರಿಕತೆಯ ಕಡೆಗೇ ಇರುತ್ತದೆ, ಆ ಕೆಲಸವನ್ನು ಸಮಾಜದೊಡನೆ ಸಂಬಂಧಿಸುವುದರ ಕಡೆ ಅಲ್ಲ. ಈ ರೀತಿ ಸಂಬಂಧಿಸಿದಾಗ ಯಾಂತ್ರಿಕ ಕೆಲಸದ ಸ್ವರೂಪವೇ ಬದಲಾಗುತ್ತದೆ. ಕೇವಲ ಕರ್ತವ್ಯದೃಷ್ಟಿಯಿಂದ ಕೆಲಸ ಮಾಡುವವನ ಪಾಲಿಗೆ ತನ್ನ ಕೆಲಸದ ಪ್ರಯೋಜನವನ್ನು ಪಡೆಯುವ ಇತರರು ಮತ್ತು ಒಟ್ಟು ಸಮಾಜ ಪರಕೀಯವಾಗಿ ಉಳಿಯುತ್ತದೆ. ಈ ಪರಕೀಯ ಭಾವನೆ ಹೊರಟುಹೋದಮೇಲೆ ಅವನು ಮಾಡುವ ಕಾರ್ಯಗಳೆಲ್ಲ ಸೇವಾರೂಪವನ್ನು ತಾಳುತ್ತವೆ. ಮಾರ್ಟಿನ್ ಬ್ಯೂಬರ್ (Martin Buber) ಹೇಳುತ್ತಾರೆ: "ಪರಕೀಯರಿಗೆ ಮಾತ್ರ ನಮ್ಮ ಕರ್ತವ್ಯ ಮತ್ತು ಹೊಣೆ ಇರುತ್ತದೆ. ಆದರೆ ನಿಕಟವರ್ತಿಗಳಿಗೆ ನಾವು ತೋರಿಸಬೇಕಾದುದು ದಯೆ ಮತ್ತು ಪ್ರೀತಿಯನ್ನು" (*I and Thou*, p. 157). ಎಲ್ಲರೂ ನಮ್ಮ ಪಾಲಿಗೆ ನಿಕಟವರ್ತಿಗಳಾದಾಗ ನಮ್ಮ ಕೆಲಸಗಳು ಕೇವಲ ಕರ್ತವ್ಯಗಳಾಗಿ ಉಳಿಯದೆ ಅವು ದಯಾಪೂರ್ಣವೂ ಪ್ರೀತಿಪೂರ್ಣವೂ ಆಗುತ್ತವೆ. ಆದುದರಿಂದಲೇ ಶ್ರೀಮಾತೆ ಶಾರದಾದೇವಿಯವರು ಹೇಳಿದರು : "ಮಗು, ಎಲ್ಲರನ್ನೂ ನಿನ್ನವರನ್ನಾಗಿ ಮಾಡಿಕೊ, ಯಾರೂ ಪರಕೀಯರಲ್ಲ."

ಓರ್ವ ಉಪಾಧ್ಯಾಯನು ಕೇವಲ ಉದ್ಯೋಗದ ದೃಷ್ಟಿಯಿಂದ ಸಂಬಳಕ್ಕಾಗಿಯೆ ಕೆಲಸ ಮಾಡಬಹುದು, ಕರ್ತವ್ಯ ದೃಷ್ಟಿಯಿಂದಲೂ ಮಾಡಬಹುದು, ಅಥವಾ ಸೇವಾಮನೋಭಾವದಿಂದಲೂ ಮಾಡಬಹುದು. ತಾನು ಮಕ್ಕಳಿಗೆ ಸರಿಯಾಗಿ ಬೋಧಿಸಿ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡುವುದರ ಮೂಲಕ ಅದ್ಭುತ ಸೇವೆ ಸಲ್ಲಿಸುತ್ತಿರುವುದಾಗಿ ಅವನು ಭಾವಿಸಿ ತನ್ನ ಕರ್ತವ್ಯವನ್ನು ನಿರ್ವಹಿಸಿದರೆ ಅದು ಅವನಿಗೆ ಸಾರ್ಥಕತೆಯ ಭಾವವನ್ನು ನೀಡುತ್ತದೆ. ಹೀಗೆ ಪ್ರತಿಯೊಂದು ಕಾರ್ಯವನ್ನೂ ಸಾಮಾಜಿಕ ದೃಷ್ಟಿಯಿಂದ ಮಾಡಿದರೆ ಅದು ಸೇವೆಯಾಗುತ್ತದೆ.

### ನೈತಿಕ ಪ್ರಜ್ಞೆ

ಈ ಸಾಮಾಜಿಕ ಜವಾಬ್ದಾರಿ ನಮ್ಮಲ್ಲಿ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ನಮ್ಮ ಎಲ್ಲ ಕಾರ್ಯಗಳ ಹಿಂದೆ ನೈತಿಕ ಪ್ರಜ್ಞೆ ಇರಬೇಕು. ಇದಿಲ್ಲದಿದ್ದರೆ ಸಮಾಜ ಕ್ರಮೇಣ ಅನೀತಿಯ ತಾಣವಾಗುತ್ತದೆ. ಅನಂತರ ಸಮಾಜದಲ್ಲಿ ಇರುವ ಎಲ್ಲರೂ ಅದರ ದುಷ್ಪರಿಣಾಮಕ್ಕೆ ಒಳಗಾಗಬೇಕಾಗುತ್ತದೆ. ಅನೇಕರು ಮುಂದಾಗುವ ದುಷ್ಪರಿಣಾಮವನ್ನು ಅರಿಯದೆ ಅನೈತಿಕ ಮಾರ್ಗವನ್ನು ಅನುಸರಿಸುತ್ತಾರೆ. ಅದರ ದುಷ್ಫಲವನ್ನು

ಮುಂದೆ ತಾವೇ ಅಥವಾ ತಮ್ಮ ಮುಂದಿನ ಪೀಳಿಗೆ ಅನುಭವಿಸ ಬೇಕಾಗುತ್ತದೆ ಎಂಬುದರ ಪ್ರಜ್ಞೆ ಅವರಿಗಿರುವುದಿಲ್ಲ.

ಒಬ್ಬ ರೈತನು ಬ್ರೆಡ್ ಅಂಗಡಿಯವನಿಗೆ ಪ್ರತಿದಿನ ಒಂದು ಪೌಂಡ್ ಬೆಣ್ಣೆಯನ್ನು ತಂದು ಮಾರುತ್ತಿದ್ದ. ಕೆಲವು ತಿಂಗಳಾದನಂತರ ಬೆಣ್ಣೆಯ ತೂಕವನ್ನು ಪರೀಕ್ಷಿಸಿದಾಗ ಅದು ತೂಕದಲ್ಲಿ ಕಡಮೆಯಿರುವುದು ಕಂಡುಬಂತು. ಅಂಗಡಿಯವನು ರೈತನ ವಿರುದ್ಧ ಕೋರ್ಟಿಗೆ ಹೋದ. ನ್ಯಾಯಾಧೀಶರು ರೈತನನ್ನು ಕರೆದು ವಿಚಾರಿಸಿದರು. ಅವನು ಹೇಳಿದ: "ನನ್ನಲ್ಲಿ ತಕ್ಕಡಿ ಮಾತ್ರ ಇದೆ. ತೂಕದ ಕಲ್ಲುಗಳಿಲ್ಲ, ಏನು ಮಾಡಲಿ?" "ಹಾಗಾದರೆ ನೀನು ಬೆಣ್ಣೆಯನ್ನು ಹೇಗೆ ತೂಕ ಮಾಡು ತ್ತೀಯಾ?" ಎಂದು ನ್ಯಾಯಾಧೀಶರು ಕೇಳಿದರು. ರೈತನು ಉತ್ತರಿಸಿದ : "ನಾನು ಮೊದಲಿನಿಂದಲೂ ಬ್ರೆಡ್ ಅಂಗಡಿ ಯಿಂದ ಒಂದು ಪೌಂಡ್ ಬ್ರೆಡ್ ಕೊಂಡುಕೊಂಡು ಬರುತ್ತಿದ್ದೆ. ಅದನ್ನು ಒಂದು ತಕ್ಕಡಿಯಲ್ಲಿಟ್ಟು, ಬೆಣ್ಣೆಯನ್ನು ಇನ್ನೊಂದ ರಲ್ಲಿಟ್ಟು, ತೂಕ ಮಾಡಿ ಎಷ್ಟು ಬೆಣ್ಣೆ ಬರುತ್ತದೊ ಅಷ್ಟನ್ನು ಅಂಗಡಿಯವನಿಗೆ ಕೊಡುತ್ತೇನೆ. ಈಗ ಬೆಣ್ಣೆಯ ತೂಕ ಕಡಮೆಯಾಗಿದ್ದರೆ ಅದಕ್ಕೆ ಅಂಗಡಿಯವನೇ ಕಾರಣ." ಇದು ಸಾಮಾನ್ಯ ನಿಯಮ. ನಾವು ಮಾಡಿದ ಮೋಸ ಒಂದಲ್ಲ ಒಂದು ರೀತಿಯಲ್ಲಿ ನಮಗೇ ಹಿಂತಿರುಗಿ ಬರುತ್ತದೆ. ಇದರ ದುಷ್ಪರಿಣಾಮವನ್ನು ಮುಂದೆ ನಾವು ಅಥವಾ ನಮ್ಮ ಮುಂದಿನ ಪೀಳಿಗೆಯವರು ಅನುಭವಿಸಬೇಕಾಗುತ್ತದೆ. ನಮ್ಮ ಮುಂದಿನವ ರಿಗಾಗಿ ಒಳ್ಳೆಯ ಸಮಾಜವನ್ನು ನಾವು ಬಿಟ್ಟುಹೋಗಬೇಕು ಎಂಬ ಉದಾತ್ತ ಮನೋಭಾವವನ್ನು ನಾವು ಬೆಳಸಿಕೊಳ್ಳದಿದ್ದರೆ ನಮ್ಮ ಮಾನವ ಜನ್ಮ ಸಾರ್ಥಕವಾದಂತಾಗುವುದಿಲ್ಲ.

ನಾವು ಇತರರಿಗೆ ಸುಳ್ಳು ಹೇಳುತ್ತೇವೆ, ಮೋಸ ಮಾಡು ತ್ತೇವೆ. ಏನೆಲ್ಲ ಮಾಡುತ್ತೇವೆ. ಆದರೆ ಇತರರು ನಮಗೆ ಅವನ್ನು ಮಾಡಿದರೆ ನಾವು ಸಹಿಸುವುದಿಲ್ಲ. ಇದು ಅತ್ಯಂತ ಕ್ಷುದ್ರಬುದ್ಧಿ. ಇದನ್ನು ಮೀರಿಹೋಗಿ ನಮ್ಮ ಒಳಿತನ್ನು ಇತರರ ಒಳಿತಿನಲ್ಲಿ ಕಾಣುವ ಮನೋಭಾವವನ್ನು ನಾವು ಬೆಳೆಸಿಕೊಳ್ಳ ದಿದ್ದರೆ ನಾವು ಮಾಡುವ ಪ್ರತಿಯೊಂದು ಕೆಲಸವೂ ನಮ್ಮ ಬಂಧನವನ್ನು ಹೆಚ್ಚಿಸುತ್ತ ಹೋಗುತ್ತದೆ.

## ಕೆಲಸ ಮತ್ತು ಬಿಡುವು

ಕೆಲಸ ಹೆಚ್ಚು ಪರಿಣಾಕಾರಿಯಾಗಬೇಕಾದರೆ ಅದರ ಜೊತೆಗೆ ಬಿಡುವೂ ಇರಬೇಕು. ಆ ಬಿಡುವು ಎಷ್ಟಿರಬೇಕು ಹೇಗಿರಬೇಕು, ಎಂಬುದು ಸಂದರ್ಭಕ್ಕೆ ಉಚಿತವಾಗಿ ನಿರ್ಧಾರವಾಗಬೇಕು. ಒಂದು ವಾಹನವನ್ನು ಯಾವಾಗಲೂ ಓಡಿಸದೆಯೂ ಇಟ್ಟಿರಬಾರದು, ಯಾವಾಗಲೂ ಓಡಿಸುತ್ತಲೂ ಇರಬಾರದು. ಅನೇಕರು ತೀವ್ರ ಚಟುವಟಿಕೆಯಲ್ಲಿ ನಿರತರಾಗಿ ತಮ್ಮ ಸಂಬಂಧಿಕರು ಮತ್ತು ಸ್ನೇಹಿತರುಗಳ ಜೊತೆ ಕಾಲ ಕಳೆಯಲು ಸಮಯವೇ ಇರುವುದಿಲ್ಲ. ಇದರಿಂದಾಗಿ ಅವರು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಲು ಅಸಮರ್ಥರಾಗುತ್ತಾರೆ. ತಮ್ಮ ಪತ್ನಿ ಪುತ್ರ ತಂದೆ ತಾಯಿಯರನ್ನು ನೋಡಿಕೊಳ್ಳುವುದಕ್ಕೂ ಅವರಿಗೆ ಪುರಸೊತ್ತು ಇರುವುದಿಲ್ಲ. ಇದರಿಂದ ಕುಟುಂಬ ಜೀವನದಲ್ಲಿ ಒಡಕು ಕಾಣಿಸಿಕೊಳ್ಳುತ್ತದೆ. ಯಾವ ವ್ಯಕ್ತಿಯು ತನ್ನ ಕುಟುಂಬದವರೊಡನೆ ಉತ್ತಮ ಸಂಬಂಧವನ್ನು ಇಟ್ಟುಕೊಂಡು ನೆಮ್ಮದಿಯ ಕುಟುಂಬ ಜೀವನವನ್ನು ನಡೆಸುತ್ತಾನೆಯೊ ಅವನಿಗೆ ಸಾಮಾಜಿಕ ಪ್ರಜ್ಞೆಯೂ ಇರುತ್ತದೆ ಮತ್ತು ವ್ಯವಹಾರವೂ ನೀತಿವಂತವಾಗಿರುತ್ತದೆ. ಎರಿಕ್ ಫ್ರೋಮ್ (Erich Fromm) ಹೇಳುತ್ತಾರೆ: "ರಚನಾತ್ಮಕ ಚಟುವಟಿಕೆಯಲ್ಲಿ ಕ್ರಿಯೆ ಮತ್ತು ವಿಶ್ರಾಂತಿಗಳು ಲಯಬದ್ಧ ವಾಗಿ ಕೂಡಿರಬೇಕು. ರಚನಾತ್ಮಕ ಕೆಲಸ, ಪ್ರೀತಿ ಮತ್ತು ಆಲೋಚನೆ—ಇವು ಸಾಧ್ಯವಾಗುವುದು ವ್ಯಕ್ತಿಯು ಅವಶ್ಯ ವಾದಾಗ ಶಾಂತನೂ ಏಕಾಂಗಿಯೂ ಆಗಿರಲು ಸಮರ್ಥ ನಾದಾಗಲೇ. ಇತರರ ಮಾತನ್ನು ಕೇಳಬೇಕಾದರೆ, ವ್ಯಕ್ತಿಗೆ, ತನ್ನ ಅಂತರಂಗದ ಧ್ವನಿಯನ್ನೂ ಕೇಳುವ ಯೋಗ್ಯತೆ ಇರಬೇಕು. ಇತರರೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳಲು ವ್ಯಕ್ತಿಯು ತನ್ನೊಡನೆ ತಾನಿರುವುದೂ ಅವಶ್ಯಕ." (*Man for Himself*, p. 113)

> **ಇಡೀ ದಿನ ಕಾರ್ಯನಿರತರಾಗಿರುವ ಮತ್ತು ರಾತ್ರಿ ಊಟವಾದ ಕೂಡಲೆ ಮಲಗಿ ಕುಂಭಕರ್ಣನಿದ್ರೆ ಮಾಡುವ ವ್ಯಾಪಾರಿಗಳು ಸಂಸ್ಕೃತಿಗೆ ಯಾವುದೇ ಕೊಡುಗೆಯನ್ನು ನೀಡಲಾರರು.—ಲಿನ್ ಯುಟಾಂಗ್**

ನಾವು ಬಿಡುವಿನ ವೇಳೆಯನ್ನು ಹೇಗೆ ಕಳೆಯುತ್ತೇವೆ ಎನ್ನುವುದೂ ಅತ್ಯಂತ ಮುಖ್ಯ. ಬಿಡುವು ಕೇವಲ ಕೆಲಸದ ಹೊರೆಯಿಂದ ತಪ್ಪಿಸಿಕೊಳ್ಳುವ ವಿಧಾನವಾಗಬಾರದು. ಕೇವಲ ಮನರಂಜನೆ ಮತ್ತು ಉದ್ರೇಕಗಳನ್ನು ನೀಡುವ ಕಾರ್ಯಕ್ರಮ ಗಳಲ್ಲಿ ಬಿಡುವಿನ ಸಮಯವನ್ನು ಕಳೆಯುವುದು ನಿಜವಾದ ಬಿಡುವಿನ ಪ್ರತಿಫಲವನ್ನು ನೀಡದೆ ಇರಬಹುದು. ಬಿಡುವಿನ ಸಮಯವನ್ನೂ ರಚನಾತ್ಮಕ ಚಟುವಟಿಕೆಗಳಲ್ಲಿ ಕಳೆಯ ಬಹುದು, ಉತ್ತಮ ಸಂಗೀತವನ್ನು ಕೇಳುವುದು, ಉತ್ತಮ ಸಾಹಿತ್ಯವನ್ನು ಓದುವುದು ಮುಂತಾದವುಗಳಲ್ಲಿ ಕಳೆಯ ಬಹುದು. ನಿಜವಾಗಿಯೂ ಯಾವುದೇ ಕಲೆಯ ಅಭಿವೃದ್ಧಿ ಜನರು ಬಿಡುವಿನ ವೇಳೆಯನ್ನು ಹೇಗೆ ಉಪಯೋಗಿಸುತ್ತಾರೆ ಎಂಬುದನ್ನು ಅವಲಂಬಿಸಿರುತ್ತದೆ.

## ಕೆಲಸದ ಹಿನ್ನೆಲೆ

ಛಾಂದೋಗ್ಯ ಉಪನಿಷತ್ತಿನಲ್ಲಿ ಒಂದು ಹೇಳಿಕೆ ಇದೆ: **ಯದೇವ ವಿದ್ಯಯಾ ಕರೋತಿ ಶ್ರದ್ಧಯಾ ಉಪನಿಷದಾ ತದೇವ ವೀರ್ಯವತ್ತರಂ ಭವತಿ** (1.1.10)— "ಯಾವುದನ್ನು ಜ್ಞಾನ ಪೂರ್ವಕವಾಗಿಯೂ ಶ್ರದ್ಧೆಯಿಂದಲೂ ಆಳ ಚಿಂತನೆಯಿಂದಲೂ

ಮಾಡಲಾಗುವುದೊ ಅದೇ ಹೆಚ್ಚು ಪರಿಣಾಮಕಾರಿಯಾಗುವುದು." ಇದು ಆಧ್ಯಾತ್ಮಿಕ ಸಾಧನೆಯೂ ಸೇರಿದಂತೆ ಎಲ್ಲ ಕಾರ್ಯಕ್ಷೇತ್ರಕ್ಕೂ ಅನ್ವಯಿಸುತ್ತದೆ. ಮೊದಲು ಕೆಲಸದ ಬಗ್ಗೆ ಪೂರ್ಣ ಮಾಹಿತಿ ಇರಬೇಕು. ಅಲ್ಪ ಸ್ವಲ್ಪ ಜ್ಞಾನದಿಂದ ಏನನ್ನಾದರೂ ಮಾಡಲು ಹೋದರೆ ಅನಾಹುತಕ್ಕೆ ಕಾರಣವಾಗುತ್ತದೆ. ಕೆಲವರು ಔಷಧದ ಬಗ್ಗೆ ಸ್ವಲ್ಪ ತಿಳಿದುಕೊಂಡು ವೈದ್ಯಕೀಯ ವೃತ್ತಿಗೆ ಇಳಿದು ಅನೇಕ ರೋಗಿಗಳ ರೋಗವನ್ನು ಹೆಚ್ಚಿಸುತ್ತಾರೆ. ಕೆಲವರು ಸಂಗೀತವನ್ನು ಕಲಿಯಲು ಪ್ರಾರಂಭಿಸುತ್ತಿದ್ದಂತೆಯೇ ಕಚೇರಿ ನೀಡಲು ಶುರುಮಾಡುತ್ತಾರೆ. ಇದು ವ್ಯಕ್ತಿಯ ಪ್ರೌಢತ್ವದ ಕೊರತೆಯಿಂದ ಉಂಟಾಗುತ್ತದೆ.

ನಾವು ಮಾಡುವ ಕೆಲಸದಲ್ಲಿ, ಅದು ಯಾವುದೇ ಆಗಲಿ—ಕೇವಲ ಕಸಗುಡಿಸುವಂತಹ ಸಾಮಾನ್ಯ ಕೆಲಸವಾಗಲಿ—ಶ್ರದ್ಧೆಯಿರಬೇಕು. ಶ್ರದ್ಧೆ ಎಂಬ ಶಬ್ದವು ಕಾರ್ಯನಿಷ್ಠೆ, ಆದರ, ಗೌರವ, ಪ್ರೀತಿ ಮುಂತಾದ ವಿಧಾಯಕ ಗುಣಗಳನ್ನೆಲ್ಲ ಸೂಚಿಸುತ್ತದೆ. ನಾವು ಒಂದು ಕೆಲಸವನ್ನು ತೆಗೆದುಕೊಂಡರೆ ನಮ್ಮ ಪೂರ್ಣವ್ಯಕ್ತಿತ್ವವನ್ನು ಅದರಲ್ಲಿ ತೊಡಗಿಸಿ ಆ ಸಂದರ್ಭಕ್ಕೆ ಅದೇ ಸರ್ವಸ್ವ ಎಂಬಂತೆ ಅದನ್ನು ಮಾಡಬೇಕು. ವಿವೇಕಾನಂದರು ಹೇಳುತ್ತಾರೆ: "ನೀವು ಯಾವುದಾದರೂ ಕರ್ಮವನ್ನು ಮಾಡುತ್ತಿರುವಾಗ ಅದನ್ನುಳಿದು ಇನ್ನಾವುದನ್ನೂ ಚಿಂತಿಸಬೇಡಿರಿ. ಅದನ್ನು ಉಪಾಸನೆಯಂತೆ ಮಾಡಿರಿ. ತತ್ಕಾಲಕ್ಕೆ ನಿಮ್ಮ ಆಯುಷ್ಯವನ್ನೆಲ್ಲ ಅದಕ್ಕೇ ವಿನಿಯೋಗಿಸಿರಿ. ಆ ಪ್ರಕಾರವಾಗಿ ಕರ್ಮವನ್ನು ಉದ್ದೇಶಿಸಿಯೇ ಕರ್ಮ ಮಾಡುವುದನ್ನು ಕರ್ಮಯೋಗದಲ್ಲಿ ಕರ್ಮದ್ವಾರಾ ಈಶ್ವರಾರಾಧನೆ ಮಾಡುವುದೆಂದು ಹೇಳಿರುತ್ತದೆ" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು. ೭೨).

ಕೆಲಸವನ್ನು ಆಳ ಚಿಂತನೆಯೊಂದಿಗೆ ಮಾಡಬೇಕು. ಅಂದರೆ ಆ ಕೆಲಸದಿಂದ ತನ್ನ ಮೇಲಾಗಲಿ ಇತರರ ಮೇಲಾಗಲಿ ಯಾವ ರೀತಿಯ ಪರಿಣಾಮ ಉಂಟಾಗುತ್ತದೆ, ಅದು ನೈತಿಕ ಆದರ್ಶಕ್ಕೆ ಅನುಗುಣವಾಗಿದೆಯೇ ಇಲ್ಲವೆ ಮತ್ತು ಅದು ತನ್ನ ಜೀವನಾದರ್ಶಕ್ಕೆ ಪೂರಕವಾಗಿದೆಯೇ ಇಲ್ಲವೆ ಎಂಬುದರ ಆಳ ಪರಿಜ್ಞಾನ ಇರಬೇಕು. ಸ್ವಭಾವತಃ ಯಾವ ಕೆಲಸವೂ ಒಳಿತೂ ಅಲ್ಲ ಕೆಡುಕೂ ಅಲ್ಲ. ನಮ್ಮ ಮನೋಭಾವಕ್ಕನುಗುಣವಾಗಿ ಅದು ಕೆಟ್ಟದೊ ಒಳ್ಳೆಯದೊ ಆಗುತ್ತದೆ. ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಯಾವುದು ನಮ್ಮ ಆದರ್ಶಕ್ಕೆ ಪೂರಕವೂ ಪ್ರೇರಕವೂ ಆಗಿರುತ್ತದೊ ಅದು ಒಳ್ಳೆಯದು, ಮತ್ತು ಇದಕ್ಕೆ ವಿರುದ್ಧವಾದುದು ಕೆಡುಕು.

## ಎಲ್ಲ ಕೆಲಸವೂ ಒಂದೇ

ಕೆಲಸದಲ್ಲಿ ಮೇಲು ಕೀಳೆಂಬುದಿಲ್ಲ. ಆದರೆ ವ್ಯಕ್ತಿಯ ಮನೋಭಾವ ಮತ್ತು ಸಾಮಾಜಿಕ ಪರಿಸರ ಕೆಲಸದಲ್ಲಿ ಈ ವ್ಯತ್ಯಾಸವನ್ನು ಉಂಟುಮಾಡುತ್ತವೆ. ಕೆಲವು ಬಗೆಯ ಕೆಲಸಗಳಲ್ಲಿ ತೊಡಗಿರುವವರನ್ನು ಸಮಾಜವು ನಿಕೃಷ್ಟ ದೃಷ್ಟಿಯಿಂದ ಕಾಣುವುದರಿಂದ ಅನೇಕರು, ಅನಿವಾರ್ಯವಲ್ಲದಿದ್ದರೆ, ಆ ಕೆಲಸಗಳನ್ನು ಮಾಡಲು ಇಷ್ಟಪಡುವುದೇ ಇಲ್ಲ. ಅನಿವಾರ್ಯವಾಗಿ ಮಾಡುವವರೂ ಗೊಣಗುತ್ತ, ತಮ್ಮ ಹಣೆಬರಹವನ್ನು ಹಳಿಯುತ್ತ ಮಾಡುತ್ತಾರೆ. ಆದರೆ ಸಮಾಜದಲ್ಲಿ ಎಲ್ಲ ಕೆಲಸಗಳೂ ಆವಶ್ಯಕ, ಎಲ್ಲವೂ ಶ್ರೇಷ್ಠ. ಅತ್ಯಂತ ನಿಕೃಷ್ಟವೆಂದು ನಾವು ತಿಳಿಯುವ ಕೆಲಸವು ಸಮಾಜದ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು. ಜಾಡಮಾಲಿಯ ಕೆಲಸ ಆಳುವವನಿಗಿಂತ ಕಡಮೆಯದೇನಲ್ಲ. ಆಳುವವನಾದರೂ ಕೆಲಸ ನಿಲ್ಲಿಸಬಹುದು, ಆದರೆ ಜಾಡಮಾಲಿ ಕೆಲಸ ನಿಲ್ಲಿಸಿದರೆ ಊರಿಗೆ ಊರೇ ಹೊಲಸಾಗುತ್ತದೆ.

ಒಂದು ಸಂಗೀತ ಕಛೇರಿಯಲ್ಲಿ ಎಲ್ಲರ ಪಾತ್ರವೂ ಮುಖ್ಯ—ತಂಬೂರಿ ಬಾರಿಸುವವನೂ ಮುಖ್ಯ, ತಾಳ ಬಾರಿಸುವವನೂ ಮುಖ್ಯ. ಹಾಡುವವನು ಮುಖ್ಯವಾದರೂ ಇತರರು ಸಹಕರಿಸದೆ ಇದ್ದರೆ ಸಂಗೀತ ಉತ್ತಮವಾಗುವುದಿಲ್ಲ. ಸಂಗೀತಗಾರನು ಎಲ್ಲರ ಮೆಚ್ಚುಗೆಯನ್ನೂ ಪಡೆಯಬೇಕು, ಸಂಗೀತದಲ್ಲಿ ಭಾಗವಹಿಸುವ ಎಲ್ಲರ ವಿಶ್ವಾಸವನ್ನೂ ಗಳಿಸಬೇಕು—ಯಾರನ್ನೂ ನಿಕೃಷ್ಟವಾಗಿ ಕಾಣುವಂತಿಲ್ಲ. ಆಗಲೇ ಒಳ್ಳೆಯ ಸಂಗೀತ ಹೊರಹೊಮ್ಮುತ್ತದೆ. ಇದೇ ರೀತಿ ಎಲ್ಲ ಕೆಲಸವನ್ನೂ ಸಮಾನವಾಗಿ ಗೌರವಿಸುವ ಪ್ರವೃತ್ತಿಯನ್ನು ನಾವು ಪಡೆಯಬೇಕು. ಉನ್ನತ ಸ್ಥಾನದಲ್ಲಿರುವವರು ತಾವೂ ಆಗಾಗ ಸಾಮಾನ್ಯ ಕೆಲಸದಲ್ಲಿ ತೊಡಗುತ್ತ ಅಂತಹ ಕೆಲಸವನ್ನು ಮಾಡುವವರಿಗೆ ಉತ್ತೇಜನವನ್ನು ನೀಡಬೇಕು.

> **ಹೊಲದಲ್ಲಿ ವ್ಯವಸಾಯ ಮಾಡುವುದು ಕವಿತೆ ಬರೆಯುವಷ್ಟೇ ಗೌರವದ ಕೆಲಸ ಎಂದು ತಿಳಿಯುವವರೆಗೂ ಯಾವ ಜನಾಂಗವೂ ಅಭಿವೃದ್ಧಿ ಹೊಂದುವುದಿಲ್ಲ.**
>
> —*ಬೂಕರ್ ಟಿ. ವಾಷಿಂಗ್ಟನ್.*
>
> *(Booker T. Washington)*

ಸಾಮಾಜಿಕ ದೃಷ್ಟಿಯಿಂದ ಕೆಲಸದ ವ್ಯಾಪ್ತಿಯನ್ನು ವಿಸ್ತಾರಗೊಳಿಸುತ್ತ, ನೈತಿಕಪ್ರಜ್ಞೆಯಿಂದ ಅದನ್ನು ಶುದ್ಧಗೊಳಿಸುತ್ತ, ಜವಾಬ್ದಾರಿಪ್ರಜ್ಞೆಯಿಂದ ಅದನ್ನು ಉತ್ತಮಗೊಳಿಸುತ್ತ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಅದನ್ನು ಉನ್ನತಗೊಳಿಸುತ್ತ ನಾವು ಕಾರ್ಯ ನಿರ್ವಹಿಸಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ಕೇವಲ ಸ್ವಾರ್ಥೋದ್ದೇಶದಿಂದ ಪ್ರೇರಿತರಾಗಿ ಕೆಲಸ ಮಾಡಬಾರದು. ಯಾರು ನಿಜವಾಗಿ ಕೆಲಸ ಮಾಡಬಲ್ಲರು ಎಂಬುದನ್ನು ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಯಾರು ಸ್ವಂತ ಇಚ್ಛೆಯಿಂದ ಪ್ರೇರಿತರಾಗಿಲ್ಲವೊ, ಸ್ವಾರ್ಥದಿಂದ ಪ್ರೇರಿತರಾಗಿಲ್ಲವೊ ಅವರು ಕರ್ಮ ಮಾಡಬಲ್ಲರು. ಯಾರಿಗೆ ಯಾವ ಪ್ರಾಪಂಚಿಕ ಉದ್ದೇಶವೂ ಇಲ್ಲವೊ ಅವರು ಕೆಲಸ ಮಾಡುವರು. ಕೆಲಸದಿಂದ ಏನನ್ನೂ ಯಾರು ಬಯಸರೋ ಅವರು ಕೆಲಸ ಮಾಡಬಲ್ಲರು," (ವ್ಯಕ್ತಿತ್ವ ನಿರ್ಮಾಣ, ಪು. ೫೦-೫೧).